## ಪತ್ರಿಕಾ ಪ್ರಕಟಣೆ

ವಿಜಯಪುರ
ದಿನಾಂಕ: 03.08.2021.

### 1] ಸಿಂದಗಿ ಪೊಲೀಸ ಠಾಣೆ ಗುನ್ನೆ ನಂ: 219/2021 ಕಲಂ: 279, 304[ಎ] ಐ.ಪಿ.ಸಿ

ದಿನಾಂಕ: 02.08.2021 ರಂದು 13.30 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಭೀಮರಾವ ಸಂತರಾಮ ಸೋನೋಲೆ ಸಾ॥ ರಾತೆವಾಡಿ ತಾಲೂಕ ಮಂಗಳವೇಡ ಜಿಲ್ಲಾ ಸೊಲ್ಲಾಪೂರ ಮಿನಿ ಟ್ಯಾಂಕರ ಲಾರಿ ನಂಬರ ಎಮ್.ಎಚ್:13 ಸಿಯು:0662ನೇದ್ದರ ಚಾಲಕ. ಈತನು ತಾನು ನಡೆಸುತ್ತಿದ್ದ ಮಿನಿ ಟ್ಯಾಂಕರ ಲಾರಿಯನ್ನು ಜೇವೂರಗಿ ಕಡೆಯಿಂದ ಅತೀ ಜೋರಿನಿಂದ ಬಂದುದ್ದೆ ರಸ್ತೆಯ ಪಕ್ಕದಲ್ಲಿ ನಿಂತ ನನ್ನ ಮೊಮ್ಮಗಳಾದ ವಿದ್ಯಾಶ್ರೀ ಇವಳಿಗೆ, ಡಿಕ್ಕಿ ಹೊಡೆಯಿಸಿ ಅಪಘಾತಪಡಿಸಿತು. ಅಪಘಾತದಲ್ಲಿ ಮೊಮ್ಮಗಳಾದ ವಿದ್ಯಾಶ್ರೀ ರಸ್ತೆಯ ಮೇಲೆ ಬಿದ್ದಳು, ಹೋಗಿ ಎಬ್ಬಿಸಲು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ತಲೆಯ ಹಿಂಬಾಗ ಭಾರಿ ಘಾಯಪೆಟ್ಟಾಗಿ ಕಿವಿಯಿಂದ ಮತ್ತು ಮೂಗಿನಿಂದ ರಕ್ತ ಬಂದಿದ್ದು ಅಲ್ಲೇ ಮೋರಟಗಿ ಸರಕಾರಿ ಆಸ್ಪತ್ರೆಗೆ ಉಪಚಾರ ಕುರಿತು ತಗೆದುಕೊಂಡು ಹೋಗುವಾಗ ತೀರಿಕೊಂಡಳು. ಅಪಘಾತಪಡಿಸಿದ ಮಿನಿ ಟ್ಯಾಂಕರ ಲಾರಿ ನಂಬರ ನೋಡಲು ಎಮ್ಎಚ್:13 ಸಿಯು:0662 ನೇದ್ದು ಇದ್ದು, ಈ ಬಗ್ಗೆ ಸರೂಬಾಯಿ ಯಲ್ಲಪ್ಪ ಬಿರಾದಾರ ಸಾ॥ ಗೂಗದಡ್ಡಿ ತಾಲೂಕ; ವಿಜಯಪುರ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 02.08.2021 ರಂದು ಸಿಂದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

### 2] ಬಬಲೇಶ್ವರ ಪೊಲೀಸ ಠಾಣೆ ಗುನ್ನಾ. ನಂ: 106/2021 ಕಲಂ: 87 ಕೆ ಪಿ ಆ್ಯಕ್ಟ್

ದಿನಾಂಕ 02.08.2021 ರಂದು 09.20 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ಬಸವರಾಜ ಶೇಖಪ್ಪ ಪುಂಡಿಬೀಜ ಸಾ: ಕುಬಕಡ್ಡಿ, ತಾ: ಕೊಲಾರ. 2) ರಮೇಶ ಅಲಗೊಂಡಪ್ಪ ಬಿರಾದಾರ ಸಾ: ಕುಬಕಡ್ಡಿ, 3) ಗೈಬುಸಾಬ ಡೊಂಗ್ರಿಸಾಬ ಹುದ್ದಾರ ಸಾ: ಉಪ್ಪಲದಿನ್ನಿ, 4) ದಸ್ತಗೀರಸಾಬ ಮೌಲಾಸಾಬ ಜಾಗೀರದಾರ ಸಾ: ಉಪ್ಪಲದಿನ್ನಿ, 5) ಶಬ್ಬೀರ ದಸ್ತಗೀರಸಾಬ ಜಾಗೀರದಾರ ಸಾ: ಉಪ್ಪಲದಿನ್ನಿ, 6) ಬಾಳಪ್ಪ ಸಂಗಪ್ಪ ಹರಿಜನ ಸಾ: ಉಪ್ಪಲದಿನ್ನಿ, 7) ಅಣ್ಣಪ್ಪ ಭೀಮಪ್ಪ ಶಿಂಧೆ ಸಾ: ಮಮದಾಪೂರ, 8) ರಾಜು ಸಂಗಪ್ಪ ಸುತಾರ ಸಾ: ಕಾಖಂಡಕಿ, ಇವರು ದೂಡಿಹಾಳ ಗ್ರಾಮದ ಕನ್ನಡ ಪ್ರಾಥಮಿಕ ಶಾಲೆಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕುಳಿತು ಅಂದರ್ ಬಾಹರ್ ಅನ್ನುವ ಇಸ್ಪಿಟ್ ಜೂಜಾಟ ಆಡುತ್ತಿದ್ದಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: 7200/-ರೂ.ಗಳು ಹಾಗೂ 52 ಇಸ್ಪಿಟ್ ಎಲೆಗಳು. ಈ ಬಗ್ಗೆ ಸ:ತ: ಸೋಮನಗೌಡ. ಬಿ. ಗೌಡ್ರ ಪಿಎಸ್ಐ ಬಬಲೇಶ್ವರ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 02.08,2021 ರಂದು ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

### 3] ಬಬಲೇಶ್ವರ ಪೊಲೀಸ ಠಾಣೆ ಗುನ್ನಾ. ನಂ: 107/2021 ಕಲಂ: 78(3) ಕೆ ಪಿ ಆ್ಯಕ್ಟ್

ದಿನಾಂಕ 02.08.2021 ರಂದು 15.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಲಾಲಸಾಬ ನಬೀಲಾಲ ಗೋಠೆ. ಸಾ: ಬೀರೇಶ್ವರ ದೇವಸ್ಥಾನದ ಹತ್ತಿರ ಬಬಲೇಶ್ವರ ಈತನು ತನ್ನ ಫಾಯ್ದೆಗೋಸ್ಕರ ಒಂದು ರೂಪಾಯಿಗೆ 80ರೂ. ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಸಹಾಯದಿಂದ ಜನರಿಂದ ಹಣ ಪಡೆದುಕೊಂಡು ಬಾಂಬೆ ಕಲ್ಯಾಣ ಮಟಕಾ ಅನ್ನುವ ಓ.ಸಿ. ಜೂಜಾಟದಲ್ಲಿ ತೊಡಗಿದಾಗ ಸಿಕ್ಕಿದ್ದು, ಈ ಬಗ್ಗೆ ಸ:ತ: ಸೋಮನಗೌಡ. ಬಿ. ಗೌಡ್ರ ಪಿ.ಎಸ್.ಐ ಬಬಲೇಶ್ವರ ಪಿಎಸ್. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 02.08,2021 ರಂದು ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

### 4] ಆದರ್ಶನಗರ ಪೊಲೀಸ ಠಾಣೆ ಗುನ್ನಾ. ನಂ: 81/2021 ಕಲಂ: ಮನುಷ್ಯ ಕಾಣೆ.

ದಿನಾಂಕ 28.07.2021 ರಂದು ಬೆಳಗ್ಗೆ 07.00 ಗಂಟೆ ಸುಮಾರಿಗೆ ಇದರಲ್ಲಿಯ ಕಾಣೆಯಾದ ಚೇತನ ತಂದೆ ಮಲ್ಲಿಕಾರ್ಜುನ ಬಾಗಲಕೋಟ್, ವಯ-23 ವರ್ಷ, ಸಾ॥ ಟಾಕಳಿ, ತಾ॥ ಚಡಚಣ. ಜಿ॥ ವಿಜಯಪುರ ಈತನು ವಿಜಯಪುರದ ಆಶ್ರಮ ರೋಡಿಗೆ ಇರುವ ಎಮ್.ಹೆಚ್-13 ಪಾವ ಬಜಿ ಹೋಟೆಲ್ ಬಾಜು ಇರುವ ವಿಧ್ಯಾರ್ಥಿ ಭವನದ ಮಗ್ಗಲು ಇರುವ ಪರಶುರಾಮ ಹಡಪದ ಇವರ ಬಾಡಿಗೆ ರೂಮ್‌ನಲ್ಲಿ ಪವನ ಇತನಿಗೂ ಹೇಳದೇ ಕೇಳದೇ ರೂಮಿನಿಂದ ಹೋದವನು ಇಲ್ಲಿಯವರೆಗೂ ನಮ್ಮೂರಿಗೆ ಹಾಗೂ ವಿಜಯಪೂರದಲ್ಲಿ ಇರುವ ಬಾಡಿಗೆ ತರೀಕ ಇರುವ ರೂಮಿಗೆ ಬಂದಿರುವುದಿಲ್ಲ, ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾನೆ, ಈ ಬಗ್ಗೆ ಮಲ್ಲಿಕಾರ್ಜುನ ಮಹಾದೇವ ಬಾಗಲಕೋಟ್, ಸಾ॥ ಟಾಕಳಿ, ತಾ॥ ಚಡಚಣ. ಜಿ॥ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 02.08,2021 ರಂದು ಆದರ್ಶನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

### 5] ಚಡಚಣ ಪೊಲೀಸ ಠಾಣೆ ಗುನ್ನಾ. ನಂ: 75/2021 ಕಲಂ: 78(3) ಕೆ ಪಿ ಆ್ಯಕ್ಟ್

ದಿನಾಂಕ 02.08.2021 ರಂದು 12.15 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಅರುಣ ಅಶೋಕ ಕೋಳಿ ಸಾ॥ ಬರಡೋಲ್ ಈತನು ಬರಡೋಲ್ ಗ್ರಾಮದ ಬಸ್ಸಸ್ಟ್ಯಾಂಡ ಹತ್ತಿರ ಸಾರ್ವಜನಿಕ ಜಾಗೆಯಲ್ಲಿ ನಿಂತುಕೊಂಡು ತನ್ನ ಮುಂದೆ ನಿಂತ ಜನರಿಗೆ 01ರೂ ಗೆ 80ರೂ ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಮೇಲೆ ಕಲ್ಯಾಣ ಅಂಬುವ ಜೂಜಾಟ ಆಡುತ್ತಿದ್ದಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: ಹಣ: 560/- ರೂ, ಓ.ಸಿ. ನಂಬರ ಬರೆದ ಚೀಟಿ-01, ನೀಲಿ ಶಾಯಿಯ ಬಾಲ್‌ಪೆನ್-01 ಈ ಬಗ್ಗೆ ಸ:ತ: ಎಸ್.ಎಂ.ಪಾಟೀಲ ಸಿ.ಪಿ.ಐ, ಚಡಚಣ ವೃತ್ತ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 02.08,2021 ರಂದು ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

### 6] ಕಲಕೇರಿ ಪೊಲೀಸ ಠಾಣೆ ಗುನ್ನಾ. ನಂ: 95/2021 ಕಲಂ: ಮನುಷ್ಯ ಕಾಣೆ.

ದಿನಾಂಕ 31.07.2021 ರಂದು ರಾತ್ರಿ 09;00 ಗಂಟೆ ಸುಮಾರಿಗೆ ಇದರಲ್ಲಿಯ ಕಾಣೆಯಾದ ಬಸಯ್ಯ ಈಶ್ವರಯ್ಯ ಮಠಪತಿ ವಯಾ-35 ವರ್ಷ ಸಾ॥ ಬಿಬಿ ಇಂಗಳಗಿ ತಾ॥ ದೇವರ ಹಿಪ್ಪರಗಿ ಈತನು ಬಿಬಿ ಇಂಗಳಗಿ ಗ್ರಾಮದ ತಮ್ಮ ಮನೆಯಲ್ಲಿ ಯಾರಿಗೂ ಏನು ಹೇಳದೆ ಕೇಳದೆ ಮನೆಯಿಂದ ಹೋಗಿ ಕಾಣೆಯಾಗಿದ್ದು, ಹುಡುಕಿದರು ಈ ವರೆಗೂ ಸಿಕ್ಕಿರುವುದಿಲ್ಲ. ಪತ್ತೆ ಮಾಡಿಕೊಡಲು ವಿನಂತಿ ಅಂತ ವರದಿಯಲ್ಲಿ ನಮೂದು ಇರುತ್ತದೆ. ಈ ಬಗ್ಗೆ ಶಾಂತಮ್ಮ ಬಸಯ್ಯ ಮಠಪತಿ ಸಾ: ಬಿಬಿ ಇಂಗಳಗಿ ತಾ॥ ದೇವರ ಹಿಪ್ಪರಗಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 02.08,2021 ರಂದು ಕಲಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.